AKSHARASURYA
E-ISSN: 2583-620X
Peer-Reviewed, Multi Lingual E-Journal
Volume – 02, Issue – 03, March 2023.

# ಬೆಳ್ವೊಳ ನಾಡಿನ ಸೂಫಿ ಸಂತರು

**ಖಾಜಾಸಾಬ**
ಸಂಶೋಧನಾರ್ಥಿ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವ ವಿದ್ಯಾಲಯ, ಹಂಪಿ
ವಿದ್ಯಾರಣ್ಯ–583238
khajasabk00@gmail.com

ಸೂಫಿಗಳ ಆಸ್ಮಿತೆಯ ಹುಡುಕಾಟದಲ್ಲಿ ಬೆಳ್ವೊಳ ಪರಿಸರದ ಸೂಫಿ ಸಂತರ ಸಂಗತಿಗಳು ಗಮನಾರ್ಹವಾಗಿವೆ. ಪ್ರಾಚೀನ ಕರ್ನಾಟಕದ ಚರಿತ್ರೆಯಲ್ಲಿ 'ಬೆಳ್ವಲನಾಡು ಫಲವತ್ತಾದ ದವಸ ಧಾನ್ಯಗಳನ್ನು ಬೆಳೆಯುವಲ್ಲಿ ಈ ನಾಡು ಪ್ರಸಿದ್ಧವಾಗಿತ್ತು. ಬೆಳ್ವಲ ಎಂದರೆ ಬೆಳೆಯುವ ಹೊಲ ಎಂದರ್ಥ, ಶ್ವೇತವರ್ಣದ ನಾಡು, ಇದು ಹೆಚ್ಚು ಫಲವತ್ತಾದ ಭೂಮಿ ಸಮತಟ್ಟಾದ ಕಪ್ಪು ಮಣ್ಣಿನ ಪ್ರದೇಶ ಎಂಬ ಅರ್ಥಗಳನ್ನು ಸೂಚಿಸುತ್ತದೆ. ಈ ಪ್ರದೇಶದಲ್ಲಿ ಹೆಚ್ಚು ಹತ್ತಿ ಬಳಿಯೋ ಕಾರಣದಿಂದಾಗಿ ಇದಕ್ಕೆ ಬೆಳ್ವೊಳನಾಡು ಎಂದು ಕರೆಯುತ್ತಾರೆ.'[1] ಕಲ್ಯಾಣಿ ಚಾಲುಕ್ಯರ ಆಡಳಿತ ಪ್ರದೇಶವಾಗಿತ್ತು. ಬೆಳ್ವಲ ನಾಡಿನ ಭಾಷೆ ನಡುಗನ್ನಡ, ಪುಲಿಗೇರಿಯ ಕನ್ನಡ ಭಾಷೆಯಾಗಿದೆ. ಬೆಳ್ವಲ ನಾಡಿನ ಪ್ರದೇಶವು ಗದಗ ಜಿಲ್ಲೆಯ ಗದಗ, ನರಗುಂದ, ರೋಣ, ಧಾರವಾಡ ಜಿಲ್ಲೆಯ ನವಲಗುಂದ, ಕುಂದಗೋಳ, ಹುಬ್ಬಳ್ಳಿ ತಾಲ್ಲೂಕಿನ ಕೆಲಭಾಗ ಮತ್ತು ಬಾಗಲಕೋಟ್ ಜಿಲ್ಲೆಯ ಬಾಗಲಕೋಟೆ, ಬಾದಾಮಿ ತಾಲ್ಲೂಕುಗಳ ಕೆಲಭಾಗ. ಬೆಳಗಾವಿ ಜಿಲ್ಲೆಯ ಸವದತ್ತಿ, ರಾಮದುರ್ಗ ತಾಲ್ಲೂಕುಗಳ ಕೆಲ ಭಾಗ ಹಾಗೂ ಕೊಪ್ಪಳ ಜಿಲ್ಲೆಯ ಯಲಬುರ್ಗಾ, ಕೂಕನೂರ ತಾಲ್ಲೂಕಿನ ಕೆಲ ಭಾಗ ಈ ಬೆಳ್ವಲ ನಾಡಿನಲ್ಲಿ ಸಮಾವೇಶಗೊಂಡಿದ್ದವೆಂದು ತಿಳಿದುಬರುತ್ತದೆ. ಇದು ಲೇಖನದ ವ್ಯಾಪ್ತಿಯು ಹೌದು, ಬೆಳ್ವೊಳ ನಾಡಿನ ವ್ಯಾಪ್ತಿಯು ಹೌದು. ಹೆಚ್ಚು ಮಳೆ ಬೀಳುವ ಪ್ರದೇಶ ಬಯಲು ಸೀಮೆ ಬಯಲುನಾಡು ಬೆಳ್ವೊಲ ನಾಡು. ಬೆಳ್ವೊಳ ನಾಡಿನ ಸ್ಥಳಿಯ ಸೂಫಿ ಸಂತರನ್ನು ಅಧ್ಯಯನ ಮಾಡುವ ಉದ್ದೇಶವೂ ಇದಾಗಿದ್ದು.

- ಹಜರತ್ ಸೈಯದ್ ಮಕ್ದುಮ್–ಷಾ ಹುಸೇನಿ (ಸವದತ್ತಿ–ಹಿರೇಕುಂಬಿ)
- ರಾಜಾಬಾಗ ಸವಾರ / ಶ್ರೀ ಚಾಂಗದೇವ (ನವಲಗುಂದ–ಯಮನೂರ)
- ಹಜ್ರತ್ ಸೈಯದ್ ಸುಲೇಮಾನ ಬಾದಶಾಹ್ ಖಾದ್ರಿ ಹಂಕಾರಿ, ಚಿಸ್ತಿ, ಉರ್ಫ್ ದೂದ್ ಪೀರಾಂ ಮತ್ತು ದಾವಲ್ ಮಲ್ಲಿಕ್ (ಗದಗ–ಮುಳಗುಂದ–ಲಕ್ಷ್ಮೇಶ್ವರ)
- ಹಜರತ್ ಹುಸೇನ್–ಷಾ ವಲಿ ಮೌಲ / ಫಕೀರಸ್ವಾಮಿ (ಕೊಪ್ಪಳ–ಕೂಕನೂರ–ತಳಕಲ್ಲ)

## 1. ಹಜರತ್ ಸೈಯದ್ ಮಕ್ದುಮ್–ಷಾ ಹುಸೇನಿ (ಸವದತ್ತಿ–ಹಿರೇಕುಂಬಿ)

ಇವರು ಖಾದ್ರಿಯಾ ಪರಂಪರೆಗೆ (ಸಿಲ್‌ಸಿಲಾ) ಸೇರಿದವರು. ಮೂಲದ ಕುರಿತು ವಿವರಗಳಿಲ್ಲ ಇವರ ಸಮಾಧಿಯು ಹಿರೇಕುಂಬಿಯ ಬೆಟ್ಟದ ಮೇಲಿದೆ. ಜನರ ನಂಬಿಕೆಯಂತೆ ಏನೇ ಕಷ್ಟಗಳು ಬಂದರೂ ಜಿಯಾರತ್ ಮಾಡಿದರೆ ಎಲ್ಲಾ ಕಷ್ಟಗಳು ನಿವಾರಣೆಯಾಗುತ್ತದೆ, ಎಂದು ನಂಬಿದ್ದಾರೆ. ಪ್ರತಿ ತಿಂಗಳು ಅಮಾವಾಸ್ಯೆಯಂದು ಜನರು ನಡೆದುಕೊಳ್ಳುತ್ತಾರೆ. ಭಾವೈಕ್ಯತೆಯ ತಾಣವಾದ ಹಿರೇಕುಂಬಿಯು ಜಾತಿ, ಧರ್ಮ, ಮೀರಿದ ಆಚರಣೆ, ನಂಬಿಕೆಗಳು ಇಲ್ಲಿ ನಡೆಯುತ್ತವೆ. ಪ್ರತಿ ವರ್ಷದಂತೆ ಮೂರು ದಿನದ ಉರುಸು ನಡೆಯುತ್ತಿದೆ. ಮೊದಲನೆಯ ದಿನ ಗಂದ, ಎರಡನೆಯ ದಿನ ಉರುಸು ಮೂರನೆ ದಿನ ಜಿಯಾರತ್ ನಡೆಯುತ್ತದೆ. ಗಂಧದ ದಿವಸ ಸಾಮೂಹಿಕವಾಗಿ ಸಮಾ ನಡೆಸುತ್ತಾರೆ. ಇಲ್ಲಿ ಬೇರೆ ಬೇರೆ ಕಡೆಗಳಿಂದ ಬಂದ ದರ್ವೇಶಿ ಸೂಫಿಗಳು, ಸೂಫಿಗಳು ಹಾಗೂ ಫಕೀರರು ಸೇರಿ ಪ್ರಾರ್ಥನೆಯನ್ನು ಮಾಡುತ್ತಾರೆ. ಹರಕೆಗಳನ್ನು ಸಲ್ಲಿಸುತ್ತಾರೆ, ಬ್ಯಾಟಿಯ ರೂಪದಲ್ಲಿ ಕುರಿ ಮತ್ತು ಕೋಳಿಯನ್ನು ಬಲಿ ಕೊಡುತ್ತಾರೆ. ಇವರ ಕರಾಮತಗಳು ಜನರ ಮನದಲ್ಲಿ ಮನೆಮಾಡಿವೆ.

## 2. ರಾಜಾಬಾಗ ಸವಾರ / ಶ್ರೀ ಚಾಂಗದೇವ (ನವಲಗುಂದ–ಯಮನೂರ)

ರಾಜಾಬಾಗ್ ಸವಾರ್, ಶ್ರೀ ಚಾಂಗದೇವ ನವಲಗುಂದ ಯಮನೂರು ರಾಜಬಕ್ಷಿ ಎಂತಲೂ ಪ್ರಸಿದ್ಧಿ. 'ನಾಸಿರುದ್ದೀನ್ ನಾಗನಾಥ ಪರಂಪರೆಯ ಮಹಾನುಭವ ಸಂಪ್ರದಾಯಗಳಲ್ಲಿ ಚಾಂಗದೇವನ ಬರುತ್ತಾನೆಂದು ಮರಾಠಿ ಪರಂಪರೆ ಹೇಳುತ್ತದೆ. ಕರ್ನಾಟಕದ ಚಾಂಗದೇವನ ಆಚರಣೆಗಳಲ್ಲಿ ನಾಗನಾಥನು ಸುಳಿವಿಲ್ಲ, ಚಾಂಗದೇವನು ನವಲಗುಂದದ ಯಮನೂರುನಲ್ಲಿ ಕೆಲಕಾಲ ನೆಲೆಯೂರಿದ್ದಾನೆ ಅವನೇ ಯಮನೂರಪ್ಪ ಎಂದು ಜನಪ್ರಿಯವಾಗಿದ್ದಾರೆ.[2] ಈ ಮೇಲಿನ ಚರ್ಚೆಯಂತೆ ಯಮನೂರಿನ ರಾಜಬಕ್ಷಿ, ಚಾಂಗದೇವ ಇಬ್ಬರ ಪೂಜೆಗಳು ಪ್ರತಿನಿತ್ಯ ನಡೆಯುತ್ತದೆ. ರಾಜಭಕ್ಷಿ ದರ್ಗಾವು ಮೊಹರಂ ಹಿನ್ನೆಲೆಯಲ್ಲಿ ಮೊಹರಂ ದೈವವಾಗಿ ಯಮನೂರಿನಲ್ಲಿ ಆಚರಣೆಯಾಗುತ್ತದೆ. ಚಾಂಗದೇವನಲ್ಲಿ ನಾಥ ಮತ್ತು ಸೂಫಿ ಆಚರಣೆಗಳು ಗಮನಿಸಬಹುದು. ಇವರಿಗೆ ಸಾವಿಲ್ಲದ ಸಂತರೆಂದು ಕರೆಯುತ್ತಾರೆ. ಇಲ್ಲಿ ಪ್ರತಿವರ್ಷ ಉರುಫ್ ಜಿಯಾರತ್ ನಡೆಯುತ್ತದೆ. ಇಲ್ಲಿ ಜಡ್ಡಿನ ಜಾತ್ರೆ ಎಂದೇ ಪ್ರಸಿದ್ಧವಾಗಿರುವ ಯಮನೂರು ದೈವ ಇಲ್ಲಿ ಹರಕೆ ಹೊತ್ತವರು ಬೆಣ್ಣೆಹಳ್ಳದಲ್ಲಿ ಸ್ನಾನ ಮಾಡಿದರೆ ಚರ್ಮರೋಗ ವಾಸಿಯಾಗುತ್ತದೆ ಎಂಬ ನಂಬಿಕೆ ಇದೆ. ಕರ್ನಾಟಕದ ಅನೇಕ ಸೂಫಿಗಳು ವೈದ್ಯೆ ಶಕ್ತಿಯನ್ನು ಹೊಂದಿದ್ದಾರೆ. ಪ್ರತಿವರ್ಷ ಬೇರೆ ಬೇರೆ ರಾಜ್ಯಗಳಿಂದ ಜಿಲ್ಲೆಗಳಿಂದ ಜನರು ಬರುತ್ತಾರೆ. ಸೂಫಿ ದೈವಗಳ ನಂಬಿಕೆ ಹೆಚ್ಚಾಗಿರುವ ಈ ಕಾಲದಲ್ಲಿ ಸೂಫಿ ಸಂತರಿಗೆ ನಡೆದುಕೊಳ್ಳುವುದು ಹೆಚ್ಚು ಕಂಡುಬರುತ್ತದೆ. ಈತನಿಂದ ಪ್ರಭಾವಿತರಾಗಿ ಜನರು ಈತನ ಹೆಸರುಗಳನ್ನು ಇಟ್ಟುಕೊಂಡಿರುವುದು ಕಂಡು ಬರುತ್ತದೆ. ಯಮನೂರು, ಯಮನೂರಪ್ಪ, ಯಮುನಾಬಿ ಮುಂತಾದವು. ಈತನ ಕುರಿತು ಅನೇಕ ಪವಾಡಗಳಿವೆ ಮತ್ತು ಐತಿಹ್ಯಗಳು ಕೂಡ ಇವೆ.

## 3. ಹಜ್ರತ್ ಸೈಯದ್ ಸುಲೇಮಾನ ಬಾದಶಾಹ್ ಖಾದ್ರಿ ಹಂಕಾರಿ, ಚಿಸ್ತಿ, ಉರ್ಫ್ ದೂದ್ ಪೀರಾಂ ಮತ್ತು ದಾವಲ್ ಮಲ್ಲಿಕ್ (ಗದಗ–ಮುಳಗುಂದ–ಲಕ್ಷ್ಮೇಶ್ವರ)

ದೂದ್ ನಾನಾ ಎಂದೇ ಪ್ರಸಿದ್ಧವಾಗಿರುವ ದೂದಪೀರಾಂ ಹತ್ತೊಂಬತ್ತನೇ ಶತಮಾನದ ಉತ್ತರಾರ್ಧದಲ್ಲಿ ಪುಲಗೇರಿಗೆ ಬಂದ ಸಂತ, ಈ

ಸಂತನ ಸಮಾಧಿಯ ಗದಗ ಜಿಲ್ಲೆಯ ಲಕ್ಷ್ಮೇಶ್ವರದಲ್ಲಿದೆ. ದೂದಪೀರಾಂರವರು ಖಾದ್ರಿಯಾ ಮತ್ತು ಚಿಸ್ತಿ ಪರಂಪರೆಗೆ ಸೇರಿದವರೆಂದು ಹೇಳಬಹುದು. ಇವರು ಅದ್ವೈತದಲ್ಲಿ ಅಚಲವಾದ ನಂಬಿಕೆಯನ್ನು ಹೊಂದಿದ್ದರು. ಇವರು ಮೂಲ ಬಾಗ್ದಾದ್‌ನವರು ಎಂದು ಹೇಳುತ್ತಾರೆ. ದರ್ಗಾದ ಪ್ರಸಾದದಿಂದ ಮಹಿಳೆಯರಿಗೆ ಬಂಜೆತನ ನಿವಾರಣೆಯಾಗಿ ಸಂತಾನಭಾಗ್ಯ ಕರುಣೆಯಾಗುತ್ತದೆ ಎಂಬ ನಂಬಿಕೆಯಿದೆ. ಇಲ್ಲಿ ವಿಶೇಷ ಅಂದ್ರೆ ಪ್ರತಿ ಅಮವಾಸ್ಯೆಗೂ ಇಲ್ಲಿ ಹಲವಾರು ಭಕ್ತಾದಿಗಳು ಬರುವದಲ್ಲದೆ, ಭೂತ, ಪ್ರೇತ, ಪೀಡಿತರನ್ನು ಕರೆದುಕೊಂಡು ಬಂದು, ದೂದ್ ಪೀರಾಂನ ಸನ್ನಿಧಿಯಲ್ಲಿ ಬಿಟ್ಟಾಗ ಅಲ್ಲಿ ವಿಚಿತ್ರವಾದ ರೀತಿಯಲ್ಲಿ ಹಿಂಡು ಹಿಂಡಾಗಿ ಓಡಾಡುವುದು, ಕೂಗುವುದು, ಕೆಕೆ ಹಾಕುವುದು, ಹೊರಳಾಡುವುದು, ಕೊನೆಗೆ ದೂದ್ ಪೀರಾಂನ ಸನ್ನಿಧಿಗೆ ನಮಸ್ಕರಿಸಿ, ಭೂತ ಪ್ರೇತ ಪೀಡಿತರು ಮೊದಲಿನಂತೆ ಸಾಮಾನ್ಯರಾಗುತ್ತಾರೆ. ಇದು ಈ ದರ್ಗಾದ ಮಹಿಮೆಯಾಗಿದ್ದು, ಎಲ್ಲವೂ ದೂದ್ ಪೀರಾಂನ ಶಕ್ತಿಯೆಂದು ಜನರ ಅಪಾರ ನಂಬಿಕೆ. ಐದು ಅಮವಾಸ್ಯೆಯನ್ನು ನಿಷ್ಠೆಯಿಂದ ನಡೆದುಕೊಂಡರೆ ಗುಣಮುಖರಾಗುತ್ತಾರೆ ಎಂಬುದು ಜನರ ನಂಬಿಕೆಯಾಗಿದೆ. ಈ ದರ್ಗಾದಲ್ಲಿ ಜನರಿಗೆ ಆಯುರ್ವೇದದ ಔಷಧಿಯನ್ನು ನೀಡಲಾಗುತ್ತಿದೆ. ಒಟ್ಟೊಟ್ಟಿಗೆ ಸಮಾಜದ ಸುಧಾರಣೆಯೊಂದಿಗೆ ಜನರ ಬದುಕಿನಲ್ಲಿ ಆಶಾಕಿರಣವಾದ ಈ ಸೂಫಿ ಸಂತರು ಜನರ ಬದುಕಿನಲ್ಲಿ ತಮ್ಮದೇ ಆದ ಪಾತ್ರವನ್ನಿರ್ವಹಿಸಿದ್ದಾರೆ. ಪ್ರಮುಖ ಪವಾಡಗಳು ಗಮನಿಸಬಹುದು 'ನೇಗಿಲಯೋಗಿ ದೂದ್ ಪೀರಾಂ, ಪಟೇಲ ದಂಪತಿಗಳಿಗೆ ಸಂತಾನ ಕರುಣೆ, ಗದ್ದುಗೆಯಿಂದ ಎದ್ದುಬಂದ ದೂದ್‌ಪೀರಾಂ ಮತ್ತು ಮಾತಿಟ್ಟರೆ ಶಾಪ, ಮಾತು ಕೊಟ್ಟರೆ ವರ, ಸರ್ವ ವ್ಯಾದಿಗೆ ಮದ್ದು, ದರ್ಗಾದ ನೀರ'[4] ಮುಂತಾದವುಗಳು.

3.1 ದಾವಲ್‌ಮಲ್ಲಿಕ್ (ಮುಳಗುಂದ) : ಗದುಗಿನಿಂದ ಸು. 18 ಕಿ. ಮಿ. ದೂರವಿರುವ ಮುಳಗುಂದ ಗ್ರಾಮವು "ಸೂಫಿ" ಸಂತರ ಪರಂಪರೆಗೆ ಸ್ಥಾನ ನೀಡಿದ ಐತಿಹಾಸಿಕ ಸ್ಥಳವಾಗಿದೆ. ಮುಳುಗುಂದ ಬೆಳ್ವೊಳ 300 ವ್ಯಾಪ್ತಿಗೆ ಒಳಪಡುತ್ತದೆ. ದಾವಲ್ ಮಲ್ಲಿಕ್‌ರವರು ಗುಜರಾತ್ ಮೂಲದವರು ಎಂದು ತಿಳಿದುಬರುತ್ತದೆ. ಇವರು ನಿಜವಾದ ಹೆಸರು 'ಅಬ್ದುಲ್ ಲತಿಫ್' ಎಂದು, ಇವರ ಗುರುಗಳು ಷಾಹಾ ಆಲಂರವರು. "ಸೂಫಿ" ಮತ್ತು "ಹಿಂದೂ" ಧರ್ಮದ ಮಿಲನವೂ "ದಾವಲ್ ಮತ್ತು "ಮಲ್ಲಿಕಾರ್ಜುನ ಸ್ನೇಹಿತರ ಸಂಕೇತವೇ. "ದಾವಲ್ ಮಲ್ಲಿಕ್" ಎಂಬುದಾಗಿದೆ ಎನ್ನುವುದು ಭಕ್ತಾದಿಗಳ ನಂಬಿಕೆ.[5] ಇವರ ದರ್ಗಾವು ಮುಳುಗುಂದದ ಬೆಟ್ಟದ ಮೇಲಿದೆ. ಇವರಿಗೆ ಗಂಭೀರ ದೈವ ಎನ್ನುತ್ತಾರೆ. ದಾವಲ್ ಮಲ್ಲಿಕ್ ಅಜ್ಜನವರ ಪವಾಡಗಳು ಇಂದಿಗೂ ಸತ್ಯತೆಯಿಂದ ಕೂಡಿವೆ. ಜನರಿಗೆ ಭಯ ಹುಟ್ಟುವಂತೆ ಮಾಡಿವೆ. ಏಕೆಂದರೆ, "ಬಾಗಿಲುಗಳು ಇಲ್ಲದ ಮನೆಗಳು ಊಹೆಗೂ ಮೀರಿದ್ದು, "ದರ್ಗಾ" ಅಜ್ಜಾ ಕಾಯುತ್ತಿದ್ದಾನೆ ಎಂಬ ನಂಬಿಕೆ. ಈ ಊರಿನಲ್ಲಿ ಕಳ್ಳತನ ನಡೆಯುವುದಿಲ್ಲ. ಬೇಡಿಕೊಂಡವರು ಸರಿಯಾಗಿ ನಡೆದುಕೊಳ್ಳದಿದ್ದರೆ ಅವರಿಗೆ ಅನಾಹುತ ತಪ್ಪಿದ್ದಲ್ಲ ಎಂದು ಜನರು ನಂಬಿದ್ದಾರೆ. ಇಲ್ಲಿ ಪ್ರತಿ ವರ್ಷವೂ ಉರುಸು ನಡೆಯುತ್ತದೆ. ಹಾಗೆ ತಿಂಗಳ ಅಮಾವಾಸ್ಯೆ ಕೂಡ ಸಂಭ್ರಮದಿಂದ ಆಚರಣೆ ಮಾಡುತ್ತಾರೆ. ಹೆಣ್ಣು ಮಕ್ಕಳು ಬೇಡಿಕೊಳ್ಳುವುದು ವಿಶೇಷವಾಗಿದೆ, ನಂಬಿಕೆಯಾಗಿದೆ.

4. ಹಜರತ್ ಹುಸೇನ್–ಷಾ ವಲಿ ಮೌಲಾ / ಫಕೀರಸ್ವಾಮಿ (ಕೊಪ್ಪಳ–ಕೂಕನೂರ–ತಳಕಲ್ಲ)

ಯಲಬುರ್ಗಾ ತಾಲೂಕಿನ ತಳಕಲ್‌ನ ಹಜರತ್ ಹುಸೇನ್ ಷಾ–ವಲಿ, ಪಕೀರಸ್ವಾಮಿಯು ಖಾದ್ರಿಯ ಮತ್ತು ಚಿಸ್ತಿಯಾ ಪರಂಪರೆಗೆ ಸೇರಿದವರು. ಇವರು ಮೂಲತಃ ತೆಕ್ಕಲಕೋಟೆಯಿಂದ ಬಂದವರು ಇವರ ಕುರಿತು ಎರೆಡು ವಾದಗಳಿವೆ ಇವರು ಒಬ್ಬ ಸನ್ಯಾಸಿ ಎಂದು ಮತ್ತು ಮತ್ತೊಂದು ವಾದದ ಪ್ರಕಾರ ಇವರು ಸಂಸಾರಿಯೆಂದು ಒಂದುವಾದ ಹೇಳುತ್ತೆ ಇವರು ಮೂಲತಃ ತೆಕ್ಕಲಕೋಟೆಯಿಂದ ಬಂದವರು ಅಂತ, ಇನ್ನೊಂದು ವಾದ ಹೇಳುತ್ತೆ ಕಂಪ್ಲಿಯ ತಮ್ಮ ಮಗಳ ಮನೆಯಿಂದ ಹೊರಟಿದ್ದಾರೆ ಎಂಬ ಮಾಹಿತಿಯೂ ದೊರೆಯುತ್ತದೆ. ಇವರ ಸಮಾಧಿಯು ಯಲಬುರ್ಗಾ ತಾಲೂಕಿನ ತಳಕಲ್ ಗ್ರಾಮದಲ್ಲಿದೆ. ಇದು ಭಾವೈಕತೆ ಪ್ರತೀಕವಾಗಿದ್ದು ಇವರ ಸಮಾಧಿ ಅಂಗಳದಲ್ಲಿ ಇವರ ಶಿಷ್ಯರ ಸಮಾಧಿಗಳಿವೆ. ಈ ದರ್ಗಕ್ಕೆ ನೂರಾ ಇಪ್ಪತ್ತಾರು ವರ್ಷಗಳ ಇತಿಹಾಸವಿದೆ. ದರ್ಗಾವಿರುವ ಜಾಗವು ಮೊದಲು ಅದೇ ಊರಿನ ನೀಲನಗೌಡನದ್ದು, ಸಂತರ ಸಮಾಧಿಗಾಗಿ ದಾನವಾಗಿ ನೀಡಿದ ಜಾಗದ ಉಲ್ಲೇಖಗಳು ಸಿಗುತ್ತವೆ. ಈ ಸಂತನ ಕುರಿತಿರುವ ನಂಬಿಕೆಗಳು ಸಂತಾನ ಭಾಗ್ಯ ಕರುಣಿಸುವುದಾಗಿ ರೋಗ ನಿವಾರಣೆಯಾಗುವುದು ಅಂದುಕೊಂಡಿದ್ದು ಆಗುವುದು, ಸಮೃದ್ಧಿಗಾಗಿ ಬೇಡಿಕೊಳ್ಳುತ್ತಾರೆ. ಐತಿಹ್ಯಗಳು ಈ ಸಂತನ ದರ್ಗಾದಲ್ಲಿ ರಾತ್ರಿ ಮಲಗಿಕೊಂಡು ಹೋದರೆ ಮಕ್ಕಳ ಸಂತಾನ ಭಾಗ್ಯ ದೊರೆಯುವುದು ಎಂದು ಸ್ಥಳೀಯರ ನಂಬಿಕೆಯಾಗಿದೆ. ಒಳಕಲ್ಲಿನ ಪೂಜೆ ಸಲ್ಲಿಸಿದರೆ ಕಷ್ಟ ನಿವಾರಣೆಯಾಗುವ ಐತಿಹ್ಯವಾಗಿದೆ. ಈ ಸಂತನ ಸಮಾಧಿಯ ಪ್ರತಿವರ್ಷ ಒಂದು ಕಾಳಿನ ಎತ್ತರ ಬೆಳೆಯುತ್ತಿದೆ ಎಂಬ ಬಲವಾದ ನಂಬಿಕೆಯಿದೆ. ಪವಾಡಗಳು ನೀರಿಲ್ಲದ ಬಾವಿಯಿಂದ ನೀರು ತರಿಸಿದರಂತೆ ಆ ಬಾವಿ ಹೆಸರು ಪುರಾಣಾ ಬಾವಿ, ಪುರಂ ಬಾವಿಯಿಂದಲೂ ಕರೆಯುತ್ತಾರೆ. ಇದು ಈ ಸಂತನ ಪ್ರತಿನಿತ್ಯ ಸ್ನಾನ ಮಾಡಲು ಹೋದಾಗ ಭಕ್ತನಾದ ಮಾಳೆಕೊಪ್ಪ ಕುರುಬರ ನಿಂಗಪ್ಪ ಈ ಬಾವಿಯ ನೀರನ್ನು ತುಂಬಿ ಕೊಟ್ಟರಂತೆ ಅಂದಿನಿಂದ ಈ ಬಾವಿ ಇದಕ್ಕಾಗಿ ಸೂಫಿ ಸಂತ ಆಶೀರ್ವದಿಸಿದನಂತೆ, ನಂತರ ನನ್ನ ಜೀವವಿರುವವರೆಗೆ ನೀನೇ ಬಾವಿಯಿಂದ ನೀರು ಕೊಡಬೇಕು ಎಂದನಂತೆ, ನನ್ನ ಮರಣಾನಂತರ ನೀನು ಈ ಬಾವಿಯಿಂದ ನೀರು ತಂದು ನನಗೆ ಸ್ನಾನ ಮಾಡಿಸಬೇಕು ಎಂದು ವಚನ ನೀಡುವಂತೆ ಹೇಳಿದನಂತೆ. ಅಂದಿನಿಂದ ಇಂದಿನವರೆಗೂ ಪ್ರತಿ ವರ್ಷ ನಡೆಯುವ ಉರುಸ್‌ಗೆ ಕುರುಬರ ನಿಂಗಪ್ಪನ ಮನೆಯಿಂದಲೇ ಗಂಧ ಪ್ರಾರಂಭವಾಗುವುದು. ಭಾವೈಕ್ಯತೆಯ ಸಂಕೇತವಾಗಿದೆ. ಈ ದರ್ಗಾವು ವಿಶೇಷತೆಯು ಸಂತರ ಸಮಾಧಿಯೂ ಬೆಳೆಯುತ್ತಿರುವ ಹಿನ್ನೆಲೆಯಲ್ಲಿ ಪ್ರತಿವರ್ಷವು ಸಮಾಧಿಗೆ ಹೊದಿಸುವ ಬಟ್ಟೆ ಅನ್ನು ಹೆಚ್ಚುವರಿಯಾಗಿ ಹೋಲಿಸುತ್ತಾರೆ. ಈ ಸಂತನಿಗೆ ಮೇಲ್ಛಾವಣಿ ಇರುವುದಿಲ್ಲ ಆತನಿಗೆ ನೆರಳು ಬೇಡ ಅಂತ ಹೇಳಿದ್ದರಂತೆ.

**ಕೊನೆಯ ಮಾತು**

ಸೂಫಿ ಮೂಲಭೂತವಾಗಿ ಒಂದು ಧರ್ಮ ಅಲ್ಲ. ಅದೋಂದು ದರ್ಶಾನಿಕ ಪಂಥ ಅದರಲ್ಲಿ ತತ್ವ (ಫಿಲಾಸಫಿ) ಇರುತ್ತದೆ. ಲೋಕವನ್ನು ಅರ್ಥಮಾಡಿಕೊಳ್ಳವ ತತ್ವ ಇರುತ್ತದೆ. ಸೂಫಿ ಸಂತರು ಕರ್ನಾಟಕದ ಗುರು ಪಂಥದ ಸಾಲಿನಲ್ಲಿ ಬರುವ ಅವಧೂತರು, ಆರೂಡರು, ಯೋಗಿಗಳಂತೆ ಸೂಫಿ ಸಂತರು ಕರ್ನಾಟಕದ ಬಹುತೇಕ ಭಾಗಗಳಲ್ಲಿ ಸ್ಥಳಿಯವಾಗಿ ಬೇರುಬಿಟ್ಟಿದ್ದಾರೆ. ಬೆಳ್ವೊಳ ನಾಡಿನ ಸೂಫಿ ಸಂತರ ಈ ಅಧ್ಯಯನವು ಒಟ್ಟೊಟ್ಟಿಗೆ ಸೂಫಿ ಸಂತರು ಜೊತೆಗೆ ದರ್ಗಾಗಳ ಅಧ್ಯಯನವಾಗಿದೆ. ಸ್ಥಳೀಯ ಸೂಫಿ ಸಂತರು ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವಲ್ಲಿ ಅವರು ಯಶಸ್ವಿಯಾಗಿದ್ದಾರೆ ಎನ್ನಬಹುದು. ಈ ಸೂಫಿ ಸಂತರಿಗೆ ಅನೇಕ ಪಂಥಗಳ ಪ್ರಭಾವ ಇರುವುದನ್ನ ಗಮನಿಸಬಹುದಾಗಿದೆ. ವರ್ತಮಾನ ಸಂದರ್ಭದಲ್ಲಿ ಭಾವೈಕ್ಯತೆಯ ಪ್ರತಿಕವಾದ ಸೂಫಿ ಸಂತರ ದರ್ಶನಗಳು ಆದರ್ಶವಾಗಬೇಕಾಗಿದೆ. ಪ್ರಸ್ತುತ ಸಂದರ್ಭದಲ್ಲಿ ಸೂಫಿಗಳ ಅಧ್ಯಯನಗಳು ಹೆಚ್ಚು ಪೂರಕವಾಗಿದೆ ಎನ್ನಬಹುದು.

**ಕೊನೆ ಟಿಪ್ಪಣಿ**

1. ಪುಟ ಸಂಖ್ಯೆ–21, ಶರಣಪ್ಪ ಜಗ್ಗಲ್, ಬೆಳ್ವೊಳ ನಾಡಿನ ಜೈನ ಪರಂಪರೆ, ಅಪ್ರಕಟಿತ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ, 2021
2. ಪುಟ ಸಂಖ್ಯೆ–63, ರಹಮತ್ ತರೀಕೆರೆ, ಕರ್ನಾಟಕ ಸೂಫಿಗಳು, ಆರನೇ ಮುದ್ರಣ, ಅಭಿನವ ಪ್ರಕಾಶನ, ಬೆಂಗಳೂರು.
3. ಪುಟ ಸಂಖ್ಯೆ–64, ಹನುಮಂತಗೌಡ, ಗದಗ ಪರಿಸರದ ಸೂಫಿ ಪರಂಪರೆ ಮತ್ತು ಸಮುದಾಯ ಸಂಸ್ಕೃತಿ, ಅಪ್ರಕಟಿತ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2021.
4. ಪುಟ ಸಂಖ್ಯೆ–50, ಹನುಮಂತಗೌಡ, ಗದಗ ಪರಿಸರದ ಸೂಫಿ ಪರಂಪರೆ ಮತ್ತು ಸಮುದಾಯ ಸಂಸ್ಕೃತಿ, ಅಪ್ರಕಟಿತ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2021.

**ಅನುಬಂಧ**

- **ಪರಿಭಾಷೆಗಳು**

  ಕರಾಮತ್ = ಪವಾಡ

  ಜಿಯಾರತ್ = ಆರಾಧನೆ ಭಕ್ತಿಯಿಂದ ಸಂತನನ್ನ ಸಮಾಧಿಗೆ/ದರ್ಗಾಕ್ಕೆ ಭೇಟಿ ನೀಡುವ ಸ್ಥಳ

  ಪೀರ್ = ಎಂದರೆ ಸ್ವಂತ ಗುರು ಎಂದರ್ಥ

  ಸಮಾ = ಭಕ್ತಿ ಕೂಟ ಸಾಮೂಹಿಕವಾಗಿ ಪ್ರಾರ್ಥನೆ ಮಾಡುವುದು ದರ್ಗಾಗಳಲ್ಲಿ

  ಸೈಯದ್ = ಪೈಗಂಬರ್ ವಂಶವಾಹಿನಿ

  ಸಿಲ್‌ಸಿಲಾ = ಪರಂಪರೆ

- **ತಿಳುವಳಿಕೆದಾರರು.**
  1. ರಫಿಕ್‌ಸಾಬ್ ಕುರಟ್ಟಿ, 49, ರೈತರು (ಮುಸ್ಲಿಂ), ಗದಗ.
  2. ಯಮನೂರಸಾಬ ವಾಲಿಕಾರ, 45, ರೈತರು (ಮುಸ್ಲಿಂ), ಬಳೂಟಗಿ, ಯಮನೂರಿನ ಭಕ್ತರು.
  3. ನದಾಫ್ ಸರ್, 42, ಸರ್ಕಾರಿ ನೌಕರರು (ಮುಸ್ಲಿಂ), ತಳಕಲ್ಲಿನ ಸ್ಥಳೀಯರು, ದೈವ ಭಕ್ತರು.
  4. ಶರೀಫಸಾಬ್ ಮುಲ್ಲಾನವರ, 36, ರೈತರು (ಮುಸ್ಲಿಂ), ಕಲ್ಲಾಪೂರ ನರಗುಂದ, ಹಿರೇಕುಂಬಿಯ ಭಕ್ತರು.
  5. ಹಜರೇಸಾಬ ಮುಲ್ಲಾನವರ, 33, ಗೌಂಡಿ ಕೆಲ್ಸಾ (ಮುಸ್ಲಿಂ), ಬಾಲೆಹೊಸುರು, ಲಕ್ಷ್ಮೇಶ್ವರದ ಭಕ್ತರು.
  6. ಹಸನಸಾಬ್ ಗಡದ್, 42, ಸರ್ಕಾರಿ ನೌಕರರು (ಮುಸ್ಲಿಂ), ನರಗುಂದ, ದಾವಲ್ ಮಲ್ಲಿಕ್ ಭಕ್ತರು.
  7. ಶ್ರೀಕಾಂತ್ ತೊಂಡಿಹಾಳ, 27, ವಿದ್ಯಾರ್ಥಿ (ಕುರುಬ), ಅಡವಿಹಳ್ಳಿ ತಳಕಲ್ ಪಕೀರಸ್ವಾಮಿ ಭಕ್ತರು.

**ಆಕರಗಳು**

1. ಬಸವರಾಜ ಪೂಜಾರ, ಕೊಪ್ಪಳ ಜಿಲ್ಲೆಯ ಸೌಹರ್ದತೆಯ ತಾಣಗಳು, ಅಪ್ರಕಟಿತ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ. ಹಂಪಿ.
2. ಮಕಾನದಾರ ಎ. ಎಸ್. ಮತ್ತು ಕಣಕೆ ಎಮ್. ಆಯ್., ವಿಶ್ವ ಭಾತೃತ್ವದ ಸೂಫಿ ದೂದ ಪಿರಾಂ, ದೂದ್ ಪಿರಾಂ ಪ್ರಕಾಶನ ಲಕ್ಷ್ಮೇಶ್ವರ, 2017.
3. ರಹಮತ್ ತರೀಕೆರೆ, ಕರ್ನಾಟಕದ ಸೂಫಿಗಳು, ಅಭಿನವ ಪ್ರಕಾಶನ, ಬೆಂಗಳೂರ.
4. ಶರಣಪ್ಪ ಜಗ್ಗಲ್, ಬೆಳ್ವೊಳ ನಾಡಿನ ಜೈನ ಪರಂಪರೆ, ಅಪ್ರಕಟಿತ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2021.
5. ಹನುಮಂತಗೌಡ, ಗದಗ ಪರಿಸರದ ಸೂಫಿ ಪರಂಪರೆ ಮತ್ತು ಸಮುದಾಯ ಸಂಸ್ಕೃತಿ, ಅಪ್ರಕಟಿತ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2021.